ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಚುನಾವಣೆ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 28/1/2012

# ಮೇಲ್ಮನೆ ಒಂದು ಸ್ಥಾನಕ್ಕೆ ಫೆ.17ರಂದು ಚುನಾವಣೆ

ಬೆಂಗಳೂರು: ರಿಜ್ವಾನ್ ಅರ್ಷದ್ ಅವರಿಂದ ತೆರವಾಗಿರುವ ವಿಧಾನಪರಿಷತ್‌ನ ಒಂದು ಸ್ಥಾನಕ್ಕೆ ಚುನಾವಣೆ ನಡೆಸಲು ಚುನಾವಣಾ ಆಯೋಗ ಅಧಿಸೂಚನೆ ಹೊರಡಿಸಿದ್ದು ಫೆ.17 ರಂದು ನಿಗದಿಯಾಗಿದೆ. ಜ.30 ರಂದು ನಾಮಪತ್ರ ಸಲ್ಲಿಕೆ ಆರಂಭವಾಗಲಿದ್ದು ಫೆ.6 ನಾಮಪತ್ರ ಸಲ್ಲಿಕೆಗೆ ಕೊನೆಯ ದಿನ. ಫೆ.7 ನಾಮಪತ್ರ ಪರಿಶೀಲನೆ, ಫೆ.10 ನಾಮಪತ್ರ ವಾಪಸಾತಿಗೆ ಕಡೆಯ ದಿನ. ಫೆ.17 ರಂದು ಬೆಳಗ್ಗೆ 9 ರಿಂದ 4 ಗಂಟೆವರೆಗೆ ಮತದಾನ. ಅದೇ ದಿನ ಸಂಜೆ 5 ಗಂಟೆಗೆ ಮತ ಎಣಿಕೆ ಹಾಗೂ ಫಲಿತಾಂಶ ಪ್ರಕಟವಾಗಲಿದೆ.

ವಿಧಾನಸಭೆಯಿಂದ ವಿಧಾನಪರಿಷತ್‌ಗೆ ನಡೆಯುವ ಒಂದೇ ಸ್ಥಾನದ ಚುನಾವಣೆ ಆದ್ದರಿಂದ ಬಿಜೆಪಿ ಸದನದಲ್ಲಿ ಹೆಚ್ಚಿನ ಸಂಖ್ಯಾಬಲ ಹೊಂದಿರುವುದರಿಂದ ಬಹುತೇಕ ಅವಿರೋಧ ಆಯ್ಕೆ ಸಾಧ್ಯತೆಯಿದೆ. ಬಿಜೆಪಿ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಯಾಗಿರುವ ಲಕ್ಷ್ಮಣ ಸವದಿ ಆಗಸ್ಟ್ 20ರಂದು ಪ್ರಮಾಣ ವಚನ ಸ್ವೀಕರಿಸಿದ್ದು ಫೆ.20 ರೊಳಗೆ ವಿಧಾನಸಭೆ ಅಥವಾ ವಿಧಾನಪರಿಷತ್‌ನಿಂದ ಆಯ್ಕೆಯಾಗಬೇಕಿದೆ. ತೆರವಾಗಿರುವ ಒಂದು ಸ್ಥಾನಕ್ಕೆ ಉಪ ಚುನಾವಣೆಯಲ್ಲಿ ಸ್ಪರ್ಧೆ ಮಾಡದೆ ಬಿಟ್ಟುಕೊಟ್ಟಿದ್ದ ಆರ್. ಶಂಕರ್ ಸಹ ಆಕಾಂಕ್ಷಿಯಾಗಿದ್ದು ಯಾರಿಗೆ ಅವಕಾಶ ಸಿಗುತ್ತದೆ ಎಂಬುದು ಕಾದು ನೋಡಬೇಕಾಗಿದೆ.